(ಶ್ರೀ ಎಂ. ನಾಗಪ್ಪ)

ನಿಂದ ಹೊರಕ್ಕೆ ಬಂದಿದ್ದಾರೆ. ಕಾರಣ ಹೇಳಿರುವುದು ನೀರಿಗೆ ಅನುಕೂಲವಿಲ್ಲ, 600 ಬೆಡ್ಸ್‌ಗೆ ಅನ್ನತ್ಕೆಯಿಲ್ಲ ಅವಕಾಶವಿಲ್ಲ ಎಂದು. ಈಗ ಗುಲ್ಬರ್ಗ ದಾವಣಗೆರೆಗಳಲ್ಲಿ 20–30 ಲಕ್ಷ ಬಜೆಟ್ ಇರುವಾಗ ಸರಕಾರಿ ಕಾಲೇಜಿಗೇಕೆ ಅವಕಾಶ ಮಾಡಿಲ್ಲ ?

ಹಾಸ್ಟೆಲ್ ಸೌಕರ್ಯ ಇಲ್ಲ, ಐ. ಎಂ. ಸಿ. ಅವರು ಆ ಕಾಲೇಜನ್ನು ರೆಕಾಗ್‌ನೈಜ್ ಮಾಡಿಲ್ಲ, ಮತ್ತು ಸ್ಟಾಫ್‌ನಲ್ಲಿ ಪ್ರೊಫೆಸರು ಮತ್ತು ಅಸೋಸಿಯೇಟ್ ಪ್ರೊಫೆಸರು ಮಾತ್ರ ಇದ್ದಾರೆ. 600 ಬೆಡ್ಸ್ ಪ್ರೊವೈಡ್ ಮಾಡಿಲ್ಲ. ಲೆಕ್ಚರರ್ಸ್ ಇಲ್ಲ, ಕಾಲೇಜಿನಲ್ಲಿ ಇಷ್ಟಂಥ ಬಸ್‌ನಲ್ಲಿ ಎಂ. ಎಸ್. ಆರ್. ಟಿ. ಸಿ. ಅವರು 7 ರೂಪಾಯಿ ಚಾರ್ಜು ಮಾಡುತ್ತಾ ಇದ್ದರೆ, ಡೀನ್‌ರವರು ತಮ್ಮ ಬಸ್ಸಿನಲ್ಲಿ 10 ರೂಪಾಯಿ ಚಾರ್ಜುಮಾಡಿ ವಸೂಲು ಮಾಡುತ್ತಾ ಇದ್ದರೆ, ಸ್ಯಾನಿಟೇಷನ್ ಬಗ್ಗೆ ಅಲ್ಲಿ ನೀರು ಬಿಟ್ಟಿದ್ದು ಅದೇ ಏರಿಯಾದಲ್ಲಿ ಬಯಲಿಗೆ ಹರಿಯುತ್ತಾ ಇದೆ, ಆಡಿಟೋರಿಯಂ ಇಲ್ಲ, ಇಂಟರ್ ಕೊಲಿಜಿಯೇಟ್ ಟೂರ್ನಮೆಂಟ್ಸ್‌ಗೆ ಅವರನ್ನು ಕಳುಹಿಸುತ್ತಾ ಇಲ್ಲ ಅಂತ ಹೇಳಿ ಬಹಳ ದಿವಸದಿಂದ ಹೇಳುತ್ತಾ ಬಂದಿದ್ದಾರೆ, ನೋಟೀಸ್ ಸಹಿತ ಕೊಟ್ಟಿದ್ದಾರೆ. 18ನೇ ತಾರೀಖು ಕೊಟ್ಟು 31ನೇ ತಾರೀಖಿನವರೆಗೂ ಕಾದಿದ್ದಾರೆ, 3—4 ಜನ ವಿದ್ಯಾರ್ಥಿಗಳು ಅಮರಣ ಉಪವಾಸ ಸಹ ಕೈಕೊಂಡಿದ್ದಾರೆ, ಇದನ್ನು ತೀವ್ರಗಮನಕ್ಕೆ ತಗೆದುಕೊಳ್ಳಬೇಕೆಂದು ನೋಟೀಸ್ ಕಳುಹಿಸಿದ್ದಾರೆ, ಆದ್ದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಬಗ್ಗೆ ನಾನು ಒಂದು ಅಲ್ಪಕಾಲಾವಧಿ ಪ್ರಶ್ನೆಯನ್ನು ಕಳುಹಿಸಿದ್ದೇನೆ, ಅದನ್ನು ಒಪ್ಪಿಕೊಂಡರೆ ಈ ಪ್ರಶ್ನೆ ಬರುವುದಿಲ್ಲ ಎಂದು ಹೇಳುತ್ತೇನೆ. ಒಂದು ವೇಳೆ ಇದನ್ನು ಒಪ್ಪಿಕೊಂಡರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಾ ಇದ್ದೇನೆ.

Mr. SPEAKER.—The hon. Member's advice is not necessary. I have received the Notice of the hon member Sri Nagappa at 12.10 P. M. today. The Hon. Leader of the Opposition has also given a Calling Attention question in this behalf. I have requested the Hon. Minister to make a statement, and he is ascertaining the facts. I think, the statement will be made at the end of the day or tomorrow.

Notice of adjournment motion
re : Arrest of certain persons on 31-3-69 at Bangalore

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಇವತ್ತು ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. 31ನೇ ತಾರೀಖು ರಾತ್ರಿ ಕೆಂಪೇಗೌಡ ರಸ್ತೆಯಲ್ಲಿ ಯಾವುದೋ ಒಂದು ಚಿತ್ರ ಮಂದಿರದಲ್ಲಿ ಗಲಾಟೆ ಆಯಿತು ಅಂತ ಹೇಳಿ ಇಬ್ಬರು ಕನ್ನಡ ಚಳುವಳಿಗಾರರನ್ನು ಹಿಡಿದ್ದಾರೆ, ಸಂಪಂಗಿ ಮತ್ತು ನಾರಾಯಣ ಅಂತ ಅನ್ನುವವರನ್ನು ಹಿಡಿದು ದಸ್ತಗಿರಿ ಮಾಡಿದ್ದಾರೆ. 31ನೇ ತಾರೀಖು ಅವರು ಈ ಊರಿನಲ್ಲೇ ಇರಲಿಲ್ಲ. ಶಿವಜಿ ಗಣೇಶನ್ ಮತ್ತು ಎಂ. ಜಿ. ಆರ್. ಅವರ ಎರಡು ಪಾರ್ಟಿಗಳು ಇವೆ, ಆ ಗುಂಪಿನವರು ಅವತ್ತಿನ ದಿವಸ ಗಲಾಟೆ ಮಾಡಿರಬಹುದು, ಅದರೂ ಕೂಡ ಕನ್ನಡ ಚಳುವಳಿಗಾರರು ಗಲಾಟೆ ಮಾಡಿದ್ದಾರೆ ಎಂದು ಹೇಳಿ 8—9 ಜನರನ್ನು ದಸ್ತಗಿರಿ ಮಾಡಿ ಅವರನ್ನು ಲಾಕ್‌ಅಪನಲ್ಲಿ ಇಟ್ಟು ಅವರಿಗೆ ತೊಂದರೆ ಕೊಟ್ಟಿದ್ದಾರೆ. ಪೋಲೀಸ್‌ನವರು ಆ ಚಿತ್ರಮಂದಿರದ ಮಾಲೀಕರು ಪೋಲೀಸ್ ಕಮಿಷನರಿಗೆ ಹೇಳಿದ್ದಾರೆ ಅಂತ ಹೇಳಿ ಅವರನ್ನು ದಸ್ತಗಿರಿ ಮಾಡಿ ಲಾಕ್‌ಅಪ್‌ನಲ್ಲಿ ಹಾಕಿ ಅವರನ್ನು ಒದ್ದು ಅವರಿಗೆ ತೊಂದರೆ ಕೊಟ್ಟಿದ್ದಾರೆ. ಮನೆಯಲ್ಲಿ ಇದ್ದವರನ್ನು ಮಲಗಿಕೊಂಡಿದ್ದವರನ್ನು ಎಳೆದುಕೊಂಡು ಬಂದು ದಸ್ತಗಿರಿ ಮಾಡಿದ್ದಾರೆ ಆದ್ದರಿಂದ ಈ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ಪ್ರಶ್ನೆ ಎತ್ತಿದ್ದಾರೆ, ಇದು ಸಾಮಾನ್ಯವಾಗಿ ರಾ ಅಂಡ್ ಆರ್ಡರ್ ಪ್ರಶ್ನೆ ಇದೆ, ಇಂತಹ ಪ್ರಸಂಗಗಳು ಪ್ರತಿ ದಿವಸ ನಡೆಯು

ತ್ತವೆ. ಇದು ಸಣ್ಣ ಲೋಕಲ್ ಮ್ಯಾಟರ್ ಆದ್ದರಿಂದ ನಿಲುವಳಿನೂಚನೆಗೆ ಸಂಬಂಧಪಟ್ಟ ವಿಷಯ ಆಗುವುದಿಲ್ಲ. ಆದ್ದರಿಂದ ನನ್ನ ಅನುಮತಿಯನ್ನು ಕೊಡಲಕ್ಕೆ ಆಗುವುದಿಲ್ಲ.

Leakage of S.S.L.C. Examination Question Papers

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಏಪ್ರಿಲ್ ಒಂದರಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆ ನಡೆಯುತ್ತಾ ಇದೆ; ನಾಳೆ ಜನರಲ್ ಸೈನ್ಸ್ ನಡೆಯಬೇಕಾಗಿದೆ. ಅದರ ಪ್ರಶ್ನೆಪತ್ರಿಕೆ ನನ್ನ ಕೈಯಲ್ಲಿ ಇದೆ; ಅದನ್ನು ಒಬ್ಬರು ನನ್ನ ಹತ್ತಿರ ಕಳುಹಿಸಿದ್ದಾರೆ. ನಾಳೆ ಆಗತಕ್ಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಮಾರಾಟವಾಗುತ್ತಾ ಇವೆ. ಈ ರೀತಿ ಆಗುವುದರಿಂದ ಕೆಲವರಿಗೆ ಹೆಚ್ಚಿನ ನಂಬರುಗಳು ಬಂದು ಅವರು ಉತ್ತೀರ್ಣರಾಗುತ್ತಾರೆ. ಸೈನ್ಸ್ ಪತ್ರಿಕೆ ಲೀಕ್‌ಔಟ್ ಆಗಿದೆ, ಇದನ್ನು ಕಂಡುಹಿಡಿಯಬೇಕೆಂದು ಒಬ್ಬರು ನನಗೆ ನಾಳೆ ನಡೆಯತಕ್ಕ ಪ್ರಶ್ನೆಪತ್ರಿಕೆಯನ್ನು ಕಳುಹಿಸಿದ್ದಾರೆ. ಇದನ್ನು ನಾನು ತಮಗೆ ಕಳುಹಿಸುತ್ತೇನೆ. ತಾವು ಅಧ್ಯಕ್ಷರು ಇದನ್ನು ವಿದ್ಯಾಸಚಿವರ ಕಡೆಗೆ ಕಳುಹಿಸಿ ವಿಚಾರಣೆ ಮಾಡಿನಬಹುದು. ಇದು ಒಂದು ದೊಡ್ಡ ರ‍್ಯಾಕೆಟ್ಟಿನೋಪಾದಿಯಲ್ಲಿ ನಡೆಯುತ್ತಿದೆ. ಹೀಗಾದರೆ ಇನ್ನು ಈ ಪರೀಕ್ಷೆಗಳಿಗೆ ಒಂದು ಪವಿತ್ರತೆ ಎಲ್ಲಿದೆ? ಹಿಂದೆ ಒಂದಾವರ್ತಿ ಹೀಗೇ ಆಗಿತ್ತು. ಈ ದಿವಸ ಈ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಮಾರುಕಟ್ಟೆಗೆ ಮಾರಾಟಕ್ಕೆ ಬಂದಿವೆ. ಇದನ್ನು ನೋಡಿದರೆ ಸರ್ಕಾರ ತನ್ನ ಕರ್ತವ್ಯ ಪಾಲನೆಯಲ್ಲಿ ವಿಫಲಗೊಂಡಿದೆ ಎಂಬುದು ದೃಢಪಡುತ್ತದೆ. ಈ ವಿಚಾರದಲ್ಲಿ ಅಧ್ಯಕ್ಷರು ಸಂಬಂಧಪಟ್ಟ ಮಂತ್ರಿಗಳಿಂದ ಈ ಸಭೆಗೆ ಕೂಡಲೇ ಒಂದು ಹೇಳಿಕೆಯನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I have understood the importance of the point raised by hon. Leader of Opposition.

ಶ್ರೀ ಬಿ. ಪಿ. ಗಂಗಾಧರ್.—ಅಧ್ಯಕ್ಷರೇ, ತಾವು ಸ್ವಲ್ಪ ರೆಸ್ಯೂಂ ಮಾಡಿದರೆ ಒಂದು ವಿಚಾರವನ್ನು ತಪ್ಪುಗಮನಕ್ಕೆ ತರಬೇಕಾಗಿದೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ಏನೂ ಹೇಳುವುದು ಬೇಡ. ವಿದ್ಯಾ ಉಪಮಂತ್ರಿಗಳು ಏನಾದರೂ ಈ ವಿಷಯದಲ್ಲಿ ಹೇಳುವುದಿದ್ದರೆ ಹೇಳಬಹುದು.

ಶ್ರೀ ಬಿ. ಪಿ. ಗಂಗಾಧರ್.—ನಮ್ಮನೆ ಆ ವಿದ್ಯಾ ಉಪಮಂತ್ರಿಗಳನ್ನು ಏಕೆ ಕೇಳುತ್ತೀರೊ? I want to submit to the Chair that the Deputy Minister has not been delegated any powers. Therefore the Chair should ask the Hon. Minister Sri Shankara Gowda, to resign.

(Several members stood up and began to speak simultaneously)

Mr. SPEAKER.—I request all hon. Members to ressume their seats.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಮಂತ್ರಿಗಳು ಹೀಗೆ ಮಾತನಾಡುವುದು ಗೌರವವಲ್ಲ. ಅಂತಹ ಮಂತ್ರಿಗಳು ಈ ಸಭೆಯಲ್ಲಿ ಇರಬಾರದು. ಈ ಕಡೆಯ ಸದಸ್ಯರೊಬ್ಬರನ್ನು ಹೋಗೋ, ಬಾರೋ ಎಂದು ಕೇಳುತ್ತಿದ್ದಾರೆ. ಈ ಕಡೆಯವರೇನಾದರೂ ಅವರನ್ನು ಹೋಗೋ ಬಾರೋ ಎಂದು ಹೇಳಿದ್ದರೆ. ಅದು ತಪ್ಪು. ಅಂತಹವರು ಯಾವ ಪಕ್ಷದವರೇ ಆಗಿರಲಿ. ತಾವು ಅವರನ್ನು ಹೊರಗಡೆಗೆ ಕಳುಹಿಸಬಹುದು. ಯಾವಾಗಲೂ ಮಂತ್ರಿಗಳು ಸಾವಧಾನದಿಂದ ಇರಬೇಕು. ಒಂದುವೇಳೆ ಈ ಕಡೆಯ ಸದಸ್ಯರು ಹೆಚ್ಚು ಕಡಿಮೆ ಮಾತನಾಡಿದರೆ, ಮಂತ್ರಿಗಳಾಗಿರುವವರು ತಡೆದುಕೊಳ್ಳಬೇಕು. ಇಲ್ಲವಿದ್ದರೆ ಮಂತ್ರಿಗಳಾಗಬಾರದು. ಕಾಲಕ್ಕೆ ತಕ್ಕಂತೆ ಮಂತ್ರಿಯಾದವರು ಸಮಾಧಾನವಾಗಿರಬೇಕು. ಈ ಕಡೆಯವರು ಮಾತನಾಡಿದ್ದೂ ತಪ್ಪು. ಆ ರೀತಿ ಅವರು ಮಾತನಾಡಕೂಡದು. ಒಂದುವೇಳೆ ಆ ರೀತಿ ಮಾತನಾಡಿದ್ದರೆ, ಮಂತ್ರಿಗಳಾದವರು ಸಾವಧಾನ